JULY 03, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ರಾಜ್ಯ ಸರ್ಕಾರದ ಜನಪರ ಯೋಜನೆಗಳ ಮಾಹಿತಿಯನ್ನು, ಜನ-ಸಾಮಾನ್ಯರಿಗೆ ತಲುಪಿಸಲು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನವ ತಂತ್ರಜ್ಞಾನ ಹಾಗೂ ನವ ಮಾಧ್ಯಮಗಳನ್ನು, ಪರಿಣಾಮಕಾರಿಯಾಗಿ ಬಳಸಿಕೊಳ್ಳಲಿದೆ ಎಂದು, ನೂತನ ಆಯುಕ್ತ ಎಂ.ಎನ್. ಅನುಚೇತ, ತಿಳಿಸಿದ್ದಾರೆ. ವಾರ್ತಾ ಇಲಾಖೆಯ ನೂತನ ಆಯುಕ್ತರಾಗಿ, ಅಧಿಕಾರ ವಹಿಸಿಕೊಂಡ ಬಳಿಕ, ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ, ಜಿಲ್ಲಾ ವಾರ್ತಾಧಿಕಾರಿಗಳ ಸಭೆಯಲ್ಲಿ, ಅವರು ಮಾತನಾಡಿದರು. ಮಾಸಿಕ ಪತ್ರಿಕೆಗಳಾದ, ಜನಪದ ಹಾಗೂ ಮಾರ್ಚ್ ಆಫ್ ಕರ್ನಾಟಕ, ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ, ಕೈಪಿಡಿಯಂತಿವೆ ಎಂದರು.

<><><>

ತುಂಗಭದ್ರಾ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ, ಪ್ರಸ್ತುತ ಮಳೆ ಕೊರತೆಯಿಂದಾಗಿ, ತುಂಗಭದ್ರಾ ಜಲಾಶಯದಲ್ಲಿ ಇದುವರೆಗೆ ಸಂಗ್ರಹವಿರುವ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸುವಂತೆ ಸರ್ಕಾರ ಆದೇಶಿಸಿದೆ. ಈ ಹಿನ್ನಲೆ, ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಎಲ್ಲ ರೈತರು ಇಲಾಖೆಯೊಂದಿಗೆ ಸಹಕರಿಸುವಂತೆ, ತುಂಗಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರ ಎಸ್.ಬಿ. ಮಲ್ಲಿಗವಾಡ ಕೋರಿದ್ದಾರೆ. ಮುಂಬರುವ ದಿನಗಳಲ್ಲಿ ಸಾಕ ್ಟ ಪ್ರಮಾಣದಲ್ಲಿ ಮಳೆ ಸುರಿದು, ಜಲಾಶಯ ಭರ್ತಿಯಾದಲ್ಲಿ ನೀರಾವರಿ ಸಲಹಾ ಸಮಿತಿ, ಸಭೆ ಆಯೋಜಿಸಿ, ಬೆಳೆಗಳಿಗೆ ನೀರು ಹರಿಸುವ ಕುರಿತು ತೀರ್ಮಾನ ಕೈಗೊಳ್ಳಲಿದೆ ಎಂದು ತಿಳಿಸಿದ್ದಾರೆ.

<><><>

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕಿನ, 28 ಕೆರೆಗಳಿಗೆ ನೀರು ತುಂಬಿಸುವ, 153 ಕೋಟಿ 76 ಲಕ್ಷ ರೂಪಾಯಿ ವೆಚ್ಚದ ಯೋಜನೆಗೆ, ಶಾಸಕ ಗಾಲಿ ಜನಾರ್ದನ ರೆಡ್ಡಿ, ಚಾಲನೆ ನೀಡಿದರು.

<><><>

ಕೊಪ್ಪಳ ಜಿಲ್ಲೆ, ತಳಕಲ್‌ನಲ್ಲಿ, 'ತೊಗರಿ ಬೆಳೆ; ಸುಧಾರಿತ ಬೇಸಾಯ' ಕುರಿತ, ಒಂದು ದಿನದ ತಾಂತ್ರಿಕ ಕಾರ್ಯಾಗಾರದಲ್ಲಿ, ಕೃಷಿ ಪಂಡಿತ ಶರಣಬಸಪ್ಪ ಪಾಟೀಲ, ಮಾಹಿತಿ ನೀಡಿದರು.

<><><>

ಬಳ್ಳಾರಿ ಜಿಲ್ಲೆಯಲ್ಲಿ, ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ, ಕೆಂಪು ಮೆಣಸಿನಕಾಯಿ ಮತ್ತು ಈರುಳ್ಳಿ ಬೆಳೆಗಳನ್ನು ವಿಮೆ ಯೋಜನೆಯಡಿ ಒಳಪಡಿಸಲಾಗಿದೆ. ಕರ್ನಾಟಕ ರೈತ ಸುರಕ್ಷಾ, ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಹೆಸರು ನೋಂದಾಯಿಸಿಕೊಳ್ಳಲು ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

<><><>

ಹಾವೇರಿ ಜಿಲ್ಲೆಯಲ್ಲಿ ಕೃಷಿ, ವ್ಯಾಪಾರ ಹಾಗೂ ಸೇವಾ ವಲಯಗಳಲ್ಲಿ ಉದ್ಯಮ ಆರಂಭಿಸುವವರಿಗೆ, 20 ಲಕ್ಷ ರೂಪಾಯಿಗಳ ವರೆಗೆ, ಸಾಲ ಸೌಲಭ್ಯ ಒದಗಿಸುವ ಪ್ರಧಾನ ಮಂತ್ರಿ ಮುದ್ರಾ ಯೋಜನೆ–ಪಿ.ಎಂ.ಎಂ.ವೈ ಯಶಸ್ವಿಯಾಗಿ ಜಾರಿಯಲ್ಲಿದೆ. ಜಿಲ್ಲೆಯಲ್ಲಿ, ಯೋಜನೆ ಆರಂಭವಾದಾಗಿನಿಂದ, ಇದು ವರೆಗೆ 2 ಲಕ್ಷ 36 ಸಾವಿರದ 635 ಫಲಾನುಭವಿಗಳಿಗೆ, 2 ಸಾವಿರದ 727 ಕೋಟಿ ರೂಪಾಯಿ ಸಾಲ ವಿತರಣೆ ಮಾಡಲಾಗಿದೆ ಎಂದು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಎನ್.ಜಿ ಪ್ರಭುದೇವ.

<><><>

ಎನ್.ಜಿ ಪ್ರಭುದೇವ ಧ್ವನಿ– 41 ಸೆಕೆಂದುಗಳು

<><><>

"12ನೇ ಶತಮಾನದಲ್ಲಿ, ಶರಣರು ತಾಳೆ ಗರಿ, ಓಲೆ ಗರಿಗಳಲ್ಲಿ ಬರೆದಿಟ್ಟಿದ್ದ ವಚನಗಳನ್ನು, ತಮ್ಮ ಕ ್ಟ ಕಾಲದಲ್ಲೂ, ಊರೂರು ಅಲೆದು ಸಂಗ್ರಹಿಸಿದ ಕೀರ್ತಿ, ಡಾಕ್ಟರ್ ಫ.ಗು. ಹಳಕಟ್ಟಿ ಅವರಿಗೆ ಸಲ್ಲುತ್ತದೆ ಎಂದು, ವಿಧಾನ ಪರಿಷತ್ ಶಾಸಕ, ಎಸ್.ವಿ. ಸಂಕನೂರ ಹೇಳಿದ್ದಾರೆ. ಗದಗ ಜಿಲ್ಲಾಡಳಿತದ ಭವನದಲ್ಲಿ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಉದ್ಘಾಟಿಸಿ, ಅವರು ಮಾತನಾಡಿದರು.

<><><>

ರಾಜ್ಯದಲ್ಲಿ ವಾಸಿಸುವ ಜನರಿಗೆ ಮಾತ್ರ ಗೃಹಜ್ಯೋತಿ ಯೋಜನೆ ಅನ್ವಯವಾಗಲಿದ್ದು, ಹೊರ ರಾಜ್ಯದಿಂದ ಬಂದು ವಾಸವಾಗಿರುವ ಜನರಿಗೆ ಯೋಜನೆಯ ಲಾಭವನ್ನು ನೀಡಲು ಸಾಧ್ಯವಿಲ್ಲ ಎಂದು ಹುಬ್ಬಳ್ಳಿ ಹೆಸ್ಕಾಂ ನಿಗಮದ ಅಧ್ಯಕ್ಷ ಸೈಯ್ಯದ ಅಜ್ಜಂಪೀರ್ ಖಾದ್ರಿ ತಿಳಿಸಿದ್ದಾರೆ. ಹಾವೇರಿ ಜಿಲ್ಲೆ, ಶಿಗ್ಗಾಂವಿಯಲ್ಲಿ ಇಂದು, ಗೃಹ ಜ್ಯೋತಿ ಫಲಾನುಭವಿಗಳ ಪರಿಶೀಲನಾ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕಳೆದ ಮೂರು ವರ್ಷಗಳಿಂದ ಬಡಜನತೆಗೆ ಹೊರೆಯಾಗದಂತೆ, ಸರ್ಕಾರ 200 ಯುನಿಟ್ ವಿದ್ಯುತ್ ಉಚಿತವಾಗಿ ನೀಡುತ್ತಿದೆ. ಈ ಯೋಜನೆ ದುರುಪಯೋಗವಾಗಬಾರದು ಎಂಬ ಉದ್ದೇಶದಿಂದ ಪರಿಶೀಲನಾ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದರು.

<><><>

ಭಾರತ ರತ್ನ, ಡಾಕ್ಟರ್ ಬಿ.ಆರ್.ಅಂಬೇಡ್ಕರ ಅವರ, 14 ಅಡಿ ಎತ್ತರದ ಭವ್ಯ ಮೂರ್ತಿ, 1 ಕೋಟಿ 35 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡಿದ್ದು, ನಾಡಿದ್ದು 5ನೇ ತಾರೀಖು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಜಿಲ್ಲಾಡಳಿತ ಭವನದಲ್ಲಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಅನಾವರಣ ಗೊಳಿಸಲಿದ್ದಾರೆ ಎಂದು ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಕೆ.ಎಚ್ ಮುನಿಯಪ್ಪ ತಿಳಿಸಿದ್ದಾರೆ.

<><><>

ನೈಋತ್ಯ ರೇಲ್ವೆ ಹುಬ್ಬಳ್ಳಿ ವಲಯ, ಕಳೆದ ಜೂನ್ ತಿಂಗಳಲ್ಲಿ, ಸರಕು ಸಾಗಣೆಯಲ್ಲಿ, ದಾಖಲೆ ಮಟ್ಟದ ಪ್ರಗತಿ ಸಾಧಿಸಿದೆ. 4 ದಶಾಂಶ 1–8 ಮಿಲಿಯನ್ ಟನ್ ಸರಕು ಸಾಗಣೆ ಮಾಡಿದ್ದು, ಕಳೆದ ಅವಧಿಗಿಂತ, ಶೇಕಡ 5 ದಶಾಂಶ 2ರಷ್ಟು ಹೆಚ್ಚಾಗಿದೆ. ನಿತ್ಯ ಸರಾಸರಿ 2 ಸಾವಿರದ 2 ನೂರಾ 21 ವ್ಯಾಗನ್‌ಗಳನ್ನು ಲೋಡ್ ಮಾಡಲಾಗಿದ್ದು, 733 ಕೋಟಿ 23 ಲಕ್ಷ ರೂಪಾಯಿ ಆದಾಯ ಗಳಿಸಿದೆ.

<><><>

ಬೀದರ ತೋಟಗಾರಿಕಾ ಮಹಾವಿದ್ಯಾಲಯ, ಈ ತಿಂಗಳ 7ನೇ ತಾರೀಖಿನ ವರೆಗೆ, “ಸಸ್ಯ ಸಂತೆ” ಹಾಗೂ “ತೋಟಗಾರಿಕೆ ಮುಂಗಾರು ಅಭಿಯಾನ” ಆಯೋಜಿಸಿದೆ. ಕೃಷಿ ಇಲಾಖೆ, ಬೀದರ ಜಿಲ್ಲೆ ಜಂಟಿ ನಿರ್ದೇಶಕರಾದ, ಆರ್. ದೇವಿಕಾ ಚಾಲನೆ ನೀಡಿ, ತೋಟಗಾರಿಕೆ ರೈತರ ಆದಾಯವನ್ನು, ದ್ವಿಗುಣಗೊಳಿಸುತ್ತದೆ ಎಂದರು.ಸಸ್ಯ ಸಂತೆಯಲ್ಲಿ, ಉತ್ಕೃಷ್ಟ ಸಸಿಗಳು, ಸಾವಯವ ಪರಿಕರಗಳು, ಅಲಂಕಾರಿಕ ಹಾಗೂ ಔಷಧೀಯ ಸಸಿಗಳು ಹಾಗೂ ಮೌಲ್ಯವರ್ಧಿತ ಪದಾರ್ಥಗಳನ್ನು, ರೈತರಿಗೆ ಅತೀ ಕಡಿಮೆ ದರದಲ್ಲಿ, ಒದಗಿಸುತ್ತಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>